ವಿ. ಹಮೀದ್, ವಿಟ್ಲ
ಹುಡುಗಿ ಹುಡುಗನನ್ನು ಬಿಟ್ಟು ಅಂಕಲ್‌ನೊಂದಿಗೆ ಹೆಚ್ಚು ಸಲುಗೆಯಿಂದ ಇರಲು ಕಾರಣವೇನು?



'ಸಾಕಿದ ಪ್ರಾಣಿಯಿಂದ ಅಪಾಯ ಕಡಿಮೆ' ಎಂದು ಆಂಟಿ ಭರವಸೆ ನೀಡಿದ್ದಾಳಂತೆ.

ಗಂಜಾಂ ನಾಗರಾಜ್, ಮೈಸೂರು
ನಿಮ್ಮ ಮಿದುಳಿಗೆ ಕೈ ಹಾಕಿ ತೊಂದರೆ ಕೊಡುವ ಪ್ರಶ್ನೆಗಳಿಗೆ ನೀವು ಉತ್ತರಿಸುವುದಿಲ್ಲವಂತೆ. ನಿಜವೆ?
ಮೊದಲು ಅಂತಹ ಪ್ರಶ್ನೆಯನ್ನು ಕೇಳಿ ನೋಡೋಣ!

ಕುಮಾರ ಚಲವಾದಿ, ಹಾಸನ
ನನ್ನಾಕೆಯ ಮುನಿಸು ಕಡಿಮೆಯಾಗಲು ನಾನು ಆಕೆಗೆ ಅಡಿಗೆಯಲ್ಲಿ ಸಹಾಯ ಮಾಡಬೇಕಂತೆ. ಇದು ನ್ಯಾಯವೆ?
ನೀವೇ ಸಂಪೂರ್ಣ ಅಡುಗೆ ಮಾಡಬೇಕಾಗಬಹುದಾದ ಸ್ಥಿತಿಗೆ ಹೋಲಿಸಿದರೆ ಇದು ಅತ್ಯುತ್ಕೃಷ್ಟ ನ್ಯಾಯ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಜೀವನ ಎಂದರೆ ಹರಿಯುವ ನದಿ. ರಾಜಕೀಯ ಎಂದರೆ?



ಹರಿಯಲು ತೊಡಕಾಗುವ ಬಂಡೆಕಲ್ಲು.

ಕಾವ್ಯಶ್ರೀ ಪತ್ರಿಮಠ, ಸುರಪುರ
ವಿಧಿಲಿಖಿತ ಯಾವ ಭಾಷೆಯಲ್ಲಿದೆ?
ವಿಧಿಯ ಮಾತೃಭಾಷೆಯಲ್ಲಿ.

ಪಾಪುಗುರು, ದಾವಣಗೆರೆ
ಸ್ವಾಮೀಜಿಗಳ ಮೂಲ ಜಾತಿಯ ಮೀಸಲಾತಿ ಯಾವುದು?
ಭಕ್ತಿಪಂಥದ ಪ್ರಕಾರ ಜಾತಿ, ಮೀಸಲಾತಿ ತೊರೆದು ಭಕ್ತಿಯೇ ಮೂಲವಾದವನೇ ಸ್ವಾಮೀಜಿ.

ಬಿ.ಆರ್. ಉಷಾ, ಬೆಂಗಳೂರು
ಇಬ್ಬರು ಚೆನ್ನಾಗಿದ್ದರೆ ಹುಳಿ ಹಿಂಡುತ್ತಾರೆ ಅಂತಾರಲ್ಲಾ, ಹುಳಿ ದೇಹಕ್ಕೆ ಒಳ್ಳೆಯದಲ್ಲವೆ?
ಅಂತರಂಗಶುದ್ಧಿಗೆ ಒಳ್ಳೆಯದು, ಅಂತರಂಗ ಸುದ್ದಿಗೆ ಕೆಟ್ಟದು.

ಮಹಾವೀರ ಕಾಸರ, ಶಿವಮೊಗ್ಗ
ಸ್ವರ್ಗಕ್ಕೆ ಕಿಚ್ಚು ಹಚ್ಚಿದರೆ ಪರಿಣಾಮ ಏನಾಗಬಹುದು?
ಏನೇನೂ ಆಗದು. ವಾಟರ್‌ಪ್ರೂಫ್, ಫೈರ್‌ಪ್ರೂಫ್, ಫೂಲ್‌ಪ್ರೂಫ್ ಆಗಿರುವುದರಿಂದಲೇ ಅದು ಸ್ವರ್ಗ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಕವಿಗಳು ಕಲ್ಪನಾಲೋಕದಿಂದ ಕವಿತೆ ರಚಿಸುತ್ತಾರೆ. ಕಥೆಗಾರರು ವಾಸ್ತವಿಕತೆ ಬಿಂಬಿಸುತ್ತಾರೆ. ಯಾವುದು ಸಮಾಜಕ್ಕೆ ಯೋಗ್ಯ?
ಬದುಕಿನ ಸಾಹಿತ್ಯವನ್ನು ಎತ್ತಿ ತೋರುವ ಜೀವಗೀತೆ.

ಕೆ. ಪುರುಷೋತ್ತಮ ರೆಡ್ಡಿ, ಪಾವಗಡ
ಕೊರೊನಾ ತಡೆಗೆ ಪರಿಶೆಯ ಹಗಲು ಬಿಟ್ಟು ರಾತ್ರಿಯ ಮೌನದ ಮೇಲಣ ಕರ್ಫ್ಯೂಗೆ ಯಾವ ಲಾಜಿಕ್ಕು?
ಸೋಷಿಯಲ್ ಡಿಸ್ಟೆನ್ಸ್ ಧಿಕ್ಕರಿಸುವ ಕೆಲಸಗಳು ಆಗಲೇ ನಡೆಯುತ್ತವೆಂದು ಅವರ ಅನುಭವವಂತೆ.

ವಿ.ಕೆ. ಹಳ್ಯಾಳ, ಬನಹಟ್ಟಿ
ಕಲಬೆರಕೆ, ಭ್ರಷ್ಟಾಚಾರ, ಸ್ವಜನಪಕ್ಷಪಾತ ಈಚೆಗೆ ಮಿತಿ ಮೀರಿದೆಯಲ್ಲ ಸರ್?
ಯಕ್ಷನ ಕೊಳ, ಹೆಬ್ಬೆಟ್ಟು ಕೇಳಿದ ದ್ರೋಣ, ಗುರು ಪರಶುರಾಮರ ಕಾಲದಲ್ಲೂ ಇದೇ ಮಾತಿತ್ತಂತೆ.

ಎಂ.ಎ. ಕುಮಾರ್, ಬೆಂಗಳೂರು
ಸ್ಮಶಾನದಲ್ಲಿ ಕಾಗೆಗೆ ಕಾಯುತ್ತೇವೆ. ಮನೆಯ ಬಳಿ ಕುಳಿತ ಕಾಗೆಯನ್ನು ಓಡಿಸುತ್ತೇವೆ?
ಮತ ಹಾಕಿದಾಗ, ಕೆಲಸ ಆಗದಿದ್ದಾಗಲೂ ಇದೇ ಬುದ್ಧಿ ತೋರಿದರೆ ದೇಶ ಉದ್ಧಾರವಾದೀತು.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಸುಧಾಳ ಅರಮನೆಯಲ್ಲಿ ಅನೇಕ ಕೋಣೆಗಳಿವೆ. ಅದರಲ್ಲಿ ನಿಮ್ಮ ಕೋಣೆ ಯಾವುದು ರಾಮ್?
ಜಾಣ ಜಾಣೆಯರಿರುವ ಕೋಣೆ.

## ಬಹುಮಾನಿತ ಪ್ರಶ್ನೆ

ರತ್ನಾ ರಾಜ್‌ಕುಮಾರ್, ಹಾಸನ
ಮಹಾಭಾರತದ ದುರ್ಯೋಧನನಿಗೆ ಸಾವಿನ ನಂತರ ಸ್ವರ್ಗ ಪ್ರಾಪ್ತಿಯಾಯಿತಂತೆ. ನಿಜವೇ ಗುರೂಜಿ?
ಹಾಗೆ ಅನಿಸಿತಂತೆ. ಭೀಮನಿಲ್ಲದ ಎಲ್ಲ ಸ್ಥಳಗಳೂ ಅವನಿಗೆ ಸ್ವರ್ಗಸಮಾನ.

ಅನಸೂಯ ಟಿ, ಕೇದಿಗೆಮನೆ
ಅಣು ರೇಣು ತೃಣ ಕಾಷ್ಠಗಳಲ್ಲೂ ಇರುವ ಅವನು ಕೊರೊನಾದಲ್ಲೂ ಇದ್ದಾನೆಯೆ?
ಮಾಸ್ಕ್, ಸ್ಯಾನಿಟೈಸರ್ ವ್ಯಾಪಾರಿಗಳು, ಚೀನಾದ ಷಡ್ಯಂತ್ರಿಗಳು ಇದ್ದಾನೆ ಎನ್ನುತ್ತಿದ್ದಾರೆ.

ಪಿ. ಚಿದಾನಂದ, ಜವನಗೊಂಡನಹಳ್ಳಿ
ಇಲ್ಲೊಬ್ಬ ಬಡಜನರು ಬದುಕುವುದರಲ್ಲಿ ಅರ್ಥವೇ ಇಲ್ಲ ಎನ್ನುತ್ತಿದ್ದಾನಲ್ಲಾ...?
ಪದಜೋಡಣೆ ತಪ್ಪಿದೆ. ಅರ್ಥವೇ (ಹಣವೇ) ಇಲ್ಲದೆ ಬದುಕುವವರು ಬಡಜನರು ಎಂದಿರಬೇಕಿತ್ತು.

ವಿ.ಎಸ್. ರಾಮಮೂರ್ತಿ, ಊರಿಲ್ಲ
ಹೆಂಗಸರು ಎಷ್ಟೇ ಗಂಡುಬೀರಿ, ಗಯ್ಯಾಳಿಗಳಾಗಿದ್ದರೂ ಜಿರಳೆಗಳಿಗೆ ಹೆದರುತ್ತಾರೆ. ಏಕೆ?



ಕೈಯಲ್ಲಿ ಪೊರಕೆ ಹಿಡಿದರೆ ರೌಡಿಯೂ ಓಡುತ್ತಾನೆ. ಆದರೆ ಜಿರಳೆಗಳು ಮೀಸೆ ಕುಣಿಸುತ್ತವೆ.

ವಿ.ಜಿ. ರಾವ್, ಬೆಂಗಳೂರು
ಯಾರ ಬಗ್ಗೆ, ಯಾವುದರ ಬಗ್ಗೆ ಪ್ರಶ್ನೆ ಕೇಳಿದರೆ ಬಹುಮಾನಿತ ಪ್ರಶ್ನೆ ಅಂತ ಪ್ರಕಟವಾಗುತ್ತೆ?
ಛೆ! ಹಾಗೆಲ್ಲ ವಿಷಯ ಲೀಕ್ ಮಾಡಲು ಈ ಅಂಕಣವನ್ನೇನು ವಿ.ವಿ.ಯ ಪ್ರಶ್ನೆಪತ್ರಿಕೆ ಎಂದುಕೊಂಡಿರೆ?

ಸುಬ್ಬಲಕ್ಷ್ಮಿ ಹೆಚ್. ಕೋಲಾರ
ಲೋಕಾರ್ಪಣೆ ಎಂದರೇನು?
ಹಲವರು ಮೊದಲೇ ಕಂಡ ವಸ್ತುವನ್ನು ಫಳಫಳ ಪೇಪರಲ್ಲಿ ಸುತ್ತಿ ಕ್ಯಾಮೆರಾ ಮುಂದೆ ತೆರೆಯುವ ಕ್ರಮ.

■ ರಾಮ್